## 4:10 ಚಿನ್ನದ ಆಭರಣಗಳ ಮೇಲೆ ಬ್ಯಾಂಕಿನಿಂದ ನೇರ ಸಾಲ

| ಕ್ರ.ಸಂ | ವಿಷಯ | ನಿಯಮಗಳು |
|---|---|---|
| 1 | ಅರ್ಹತೆ (Eligibility) | ವ್ಯವಸಾಯಗಾರರು, ಕೃಷಿ ಕಾರ್ಮಿಕರು, ಸಣ್ಣ ವ್ಯಾಪಾರಸ್ಥರು, ಗ್ರಾಮೀಣ ಕುಶಲ ಕಾರ್ಮಿಗಳು, ಹಾಗೂ ಇತರರು ಬ್ಯಾಂಕಿನ ಸೇವಾಕ್ಷೇತ್ರದಲ್ಲಿ ವಾಸಿಸುತ್ತಿರುವ ನಾಮ ಮಾತ್ರ ಸದಸ್ಯರು. |
| 2 | ಸಾಲದ ಮಿತಿಯನ್ನು ನಿರ್ಧರಿಸುವ ವಿಧಾನ (Procedure for assessing the loan amount) | ಸಾಲದ ಪ್ರಮಾಣದ ಮಿತಿಯನ್ನು ನಿರ್ಧರಿಸುವಾಗ ಈ ಕೆಳಕಂಡ ಮಾರ್ಗಗಳನ್ನು ಅನುಸರಿಸಬೇಕು.<br>1. ಚಿನ್ನದ ಆಭರಣಗಳ ಒಟ್ಟು ತೂಕವನ್ನು ಗುರುತಿಸಬೇಕು.<br>2. ಆಭರಣಗಳಲ್ಲಿರುವ ಬೆಲೆ ಬಾಳುವ ಕಲ್ಲಿನ ತೂಕವನ್ನು ಒಟ್ಟು ತೂಕದಿಂದ ಕಳೆಯಬೇಕು.<br>3. ಆಭರಣಗಳ ನಿವ್ವಳ ತೂಕವನ್ನು ನಿರ್ಧರಿಸಲು ಒಟ್ಟು ತೂಕದಿಂದ–ಆಭರಣದಲ್ಲಿ ಬೆಲೆಬಾಳುವ ಕಲ್ಲಿನ /ಮುತ್ತಿನ ತೂಕವನ್ನು ಕಳೆಯಬೇಕು.<br>4. ಆಭರಣದಲ್ಲಿನ ವೇಸ್ಟೇಗಳಿಗಾಗಿ ಶೇಕಡ 5 % ರಿಂದ ಶೇಕಡ 10 % ಅನ್ನು ಮಾರ್ಜಿನ್ ಆಗಿ ಇಟ್ಟುಕೊಂಡು ಸಾಲದ ಮಿತಿಯನು ಲೆಕ್ಕಹಾಕಬೇಕು.<br>5. ಚಿನ್ನದ ಆಭರಣಗಳಲ್ಲಿ ಹೆಚ್ಚು ವ್ಯಾಕ್ಸ್ ಮತ್ತು ಬೆಸಗೆಗಳನ್ನು ಹಾಕಿದ್ದರೆ, ಆಭರಣಗಳ ನಿವ್ವಳ ತೂಕವನ್ನು ನಿರ್ಧರಿಸುವಾಗ ಹೆಚ್ಚು ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು.<br>6. ಮಂಗಳ ಸೂತ್ರದ ಮೇಲೆ ಭಾವಾತಿರೇಕವುಳ್ಳ ಬೆಲೆಯಿರುವುದರಿಂದ (Sentimental value) ಸದರಿ ಆಭರಣವನ್ನು ಅಡಮಾನ ಮಾಡಿಸಿಕೊಳ್ಳಬಾರದು.<br>7. ಚಿನ್ನದ ಆಭರಣಗಳಾದಂತಹ ಅಡಿಕೆ, ನಾಗರಜಡೆಯಲ್ಲಿ ವ್ಯಾಕ್ಸ್ ಅಂಶವು ಹೆಚ್ಚು ಇರುವುದರಿಂದ ಸಾಲಕೊಡಲು ತೆಗೆದುಕೊಳ್ಳಬಾರದು.<br>8. ಕೇಂದ್ರ ಕಛೇರಿಯಿಂದ ಕಾಲಕಾಲಕ್ಕೆ ತಿಳಿಸುವ ದರದಲ್ಲಿ ಸಾಲದ ಮಿತಿಯನ್ನು ನಿರ್ಧರಿಸುವುದು.<br>9. ಸದಸ್ಯರು ನಾಮಿನಲ್ ಸದಸ್ಯತ್ವವನ್ನು ಹೊಂದಿರಬೇಕು. |
| 3 | ಬಡ್ಡಿಯನ್ನು ವಿಧಿಸುವುದು (Application of interest) | ಬಡ್ಡಿಯ ದರವು ಸರ್ಕಾರ/ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ/ನಬಾರ್ಡ/ಅಪೆಕ್ಸ್ ಬ್ಯಾಂಕ್ ಹಾಗೂ ಕೇಂದ್ರ ಕಛೇರಿಯ ಆದೇಶದಂತೆ ಇರುತ್ತದೆ. ಈ ಸಾಲಗಳಿಗೆ ತಿಂಗಳಿಗೊಮ್ಮೆ ಬಡ್ಡಿಯನ್ನು ವಿಧಿಸಬೇಕು. |
| 4 | ಸಾಲದ ವಿಧಾನ (type of loan) | ಡಿಮಾಂಡ್ ಸಾಲ (demand loan) |
| 5 | ಬೆಲೆಕಟ್ಟುವವರ ಖರ್ಚುಗಳು (Appraiser charges) | ಆಭರಣಗಳ ಬೆಲೆಕಟ್ಟುವವರಿಗೆ ಸಾಲದ ಮೊತ್ತದ ಮೇಲೆ ಶೇ.0.10 % ಅಂದರೆ ಕನಿಷ್ಠ ರೂ.10 ಮತ್ತು ಗರಿಷ್ಠ ರೂ.350/–. ಪ್ರತಿಸಾಲದ ಖಾತೆಗೆ ಖರ್ಚುಹಾಕಿ ಅಪ್ರೈಸರ್‌ರವರ ಉಳಿತಾಯ ಖಾತೆಗೆ ಜಮಮಾಡಬೇಕು. ನಂತರ ಈ ಖರ್ಚನ್ನು ಸಾಲಗಾರರಿಂದ ವಸೂಲು ಮಾಡಿ ಅವರ ಸಾಲದ ಖಾತೆಗೆ ಜಮಮಾಡಬೇಕು. |
| 6 | ಚಿನ್ನದ ಆಭರಣಗಳ ಕಾವಲು (Custody of gold ornaments) | ಬ್ಯಾಂಕಿಗೆ ಪ್ಲೆಡ್ಜ್ ಆದ/ ಅಡವಿಟ್ಟ ಚಿನ್ನದ ಆಭರಣಗಳನ್ನು ಯಾವಾಗಲು ಕ್ಯಾಷ್ ಸೇಫ್/ ಹಣದ ಕಬ್ಬಿಣದ ತಿಜೋರಿಯಲ್ಲಿ ಬ್ಯಾಂಕಿನ ಅಧಿಕಾರಿ ಮತ್ತು ಕ್ಯಾಷಿಯರ್. ಅಂದರೆ ಕೀಗಳನ್ನು ಹೊಂದಿರುವವರ ಜಂಟಿ ಅಧೀನದಲ್ಲಿ/ ಕಾವಲಿನಲ್ಲಿ ಇರಬೇಕು. ಈ ಸಿಬ್ಬಂಧಿಗಳು ಆಭರಣಗಳ ಸುರಕ್ಷತೆಗೆ ಜಂಟಿ ಹೊಣೆಗಾರರಾಗಿರುತ್ತಾರೆ. ಜಂಟಿ ಹೊಣೆಗಾರರಾದ ಅಧಿಕಾರಿ ಮತ್ತು ಕ್ಯಾಷಿಯರ್ ತಿಜೋರಿಯ ಕೀಗಳನ್ನು ಹೊಂದಿದವರಾಗಿದ್ದು ಸಾಲದ ಲೆಡ್ಜರ್ ಪುಸ್ತಕದಲ್ಲಿ ಆಭರಣಗಳನ್ನು ಅವರ ಸುರಕ್ಷತೆಗೆ ತೆಗುದು ಕೊಂಡ |

| | | |
|---|---|---|
| | - | ಬಗ್ಗೆ ಅವರ ಕಿರು ಸಹಿಯನ್ನು ಮಾಡಬೇಕು. ಬ್ಯಾಂಕಿನ ಜಂಟಿ ಸುರಕ್ಷತೆಗೆ ತೆಗೆದುಕೊಂಡ ಆಭರಣಗಳನ್ನು ಸಾಲದ ಖಾತವಾರು ಪ್ರತ್ಯೆಕವಾದ ಚೀಲದಲ್ಲಿ ಇಟ್ಟು, ಸಾಲಗಾರನ/ರ ಹೆಸರು ಬರೆದು ಮತ್ತು ಒಂದು ಪ್ರತ್ಯೇಕವಾದ ಚೀಟಿಯಲ್ಲಿ, ಆಭರಣಗಳ ವಿವರಗಳನ್ನು ಬರೆದು, ಜಂಟಿಹೊಣೆಗಾರರ ಸಹಿಯನ್ನು ಮಾಡಿಸಿ, ದಿನಾಂಕ ಮತ್ತು ಸಾಲದ ಖಾತೆಯ ಸಂಖ್ಯೆಯನ್ನು ನಮೂದಿಸಿ ಚೀಲದೊಳಗೆ ಸೇರಿಸಬೇಕು.<br>ಸಾಲದ ಮರುಪಾವತಿಯಾದ ಕೂಡಲೇ ಸಾಲದ ಖಾತೆಯನ್ನು ಕ್ಲೋಸ್ ಮಾಡಿ, ಸಾಲದ ಲೆಡ್ಜರ್ ಪುಸ್ತಕದಲ್ಲಿ ಸಾಲಗಾರರ ಸಹಿಯನ್ನು ಕೆಳಕಂಡತೆ ರೇಕಾರ್ಡ್‌ಮಾಡಿ ಪಡೆಯವುದು.<br>1. ಚಿನ್ನದ ಆಭರಣಗಳನ್ನು ಸಂಪೂರ್ಣವಾಗಿ ಪಡೆದಿರುತ್ತೇನೆ/ವೆ, ಹಾಗೂ ಸರಿಯಾಗಿವೆ.<br>2. ಸಾಲಗಾರರ ಸಹಿ ಪಕ್ಕದಲ್ಲಿ ಜಂಟಿ ಸಂರಕ್ಷಕರು ಆಭರಣಗಳನ್ನು ಸಾಲಗಾರರಿಗೆ ಹಿಂತಿರುಗಿಸಿದ್ದಕ್ಕೆ ತಮ್ಮ ಕಿರುಸಹಿಯನ್ನು ಸಾಲದ ಪುಸ್ತಕದಲ್ಲಿ ಮಾಡಬೇಕು.<br>3. ಸಾಲಗಾರರು ತಾವು ಸಾಲ ಪಡೆಯವ ಸಮಯದಲ್ಲಿ ಪಡೆದಿದ್ದ **"ಅಂಗಿಕಾರ ರಶೀದಿ"** (acknowledgment) ನನ್ನು ಕಳೆದುಕೊಂಡ್ಡಿದ್ದರೆ ಅಂತಹ ಸಂದರ್ಭದಲ್ಲಿ ಸಾಲಗಾರರನ್ನು ಸರಿಯಾಗಿ ಗುರುತಿಸಿ ಹಾಗೂ ಒಂದು **ಇಂಡೆಮ್ನಿಟಿ ಪತ್ರವನ್ನು" ಅನುಸೂಚಿಯಲ್ಲಿ** ತಿಳಿಸಿರುವ ನಮೂನೆಯಲ್ಲಿ ಸ್ಟಾಂಪ್ ಹಾಕದೆ ತೆಗೆದು ಕೊಂಡು ಆಭರಣಗಳನ್ನು ವಾಪಸ್ ಕೊಡಬಹುದು. |
| 7 | **ಅಂಗಿಕಾರ ರಶೀದಿ ಕೊಡುವ ಬಗ್ಗೆ (issue of acknowledgment)** | ಸಾಲಕ್ಕೆ ಭದ್ರತೆಯಾಗಿ ಪಡೆದ ಆಭರಣಗಳಿಗೆ–ಸಾಲಗಾರರಿಗೆ "ಅಂಗಿಕಾರ ರಶೀದಿ" (Acknowledgement) ಯನ್ನು ಕೊಡಬೇಕು |
| 8 | **ಮೃತ ಸಾಲಗಾರರು (Deceased borrowers)** | ಸಾಲಗಾರರ ವ್ಯೆಯಕ್ತಿಕ ಹೆಸರಿನಲ್ಲಿ ಚಿನ್ನದ ಸಾಲವು ಬಾಕಿ ಇದ್ದಲ್ಲಿ ಸಾಲಗಾರನು ಮೃತ ಪಟಿದ್ದರೆ, ಆಂತ ಸಾಲದ ಖಾತೆಗಳಿಗೆ ಮರುಪಾವತಿಯನ್ನು ಪಡೆಯುವ ಮೊದಲು ಸಾಲಗಾರನ ಉತ್ತರಾಧಿಕಾರಿಗಳಿಂದ ಈ ಕೆಳಕಂಡ ನಿಯಮಗಳನೊಳಗೊಂಡ ಮುಚ್ಚಳಿಕೆಯ ಪತ್ರವನ್ನು ಪಡೆಯಬೇಕು.<br>1. ಸಾಲಕ್ಕೆ ಮರುಪಾವತಿ ಮಾಡುವವರನ್ನು ಸಾಲಗಾರನ ಆಭರಣಗಳಿಗೆ ಹಕ್ಕುದಾರರೆಂದು ಭಾವಿಸಲು ಬರುವುದಿಲ್ಲ.<br>2. ಮರುಪಾವತಿದಾರರು ಮೃತ ಸಾಲಗಾರನ ವಡವೆಗಳಿಗೆ ಬ್ಯಾಂಕಿಗೆ ಒಪ್ಪಿಗೆಯಾಗುವಂತೆ ತಾನೇ/ ವೆ ಉತ್ತರಾಧಿಕಾರಿಯೆಂದು ಖಚಿತಪಡಿಸಲು ವಿಫಲನಾದರೆ ಅದಕ್ಕೆ ಬ್ಯಾಂಕಿನವರು ಹೊಣೆಗಾರರಲ್ಲ ಮತ್ತು ಭಧ್ರತೆಯ ವಡವೆಗಳನ್ನು ವಾಪಸ್ ಕೊಡಲು ಬರುವುದಿಲ್ಲ.<br>3. ಮೃತ ಸಾಲಗಾರರು ವಡವೆಗಳನ್ನು ಮೃತರ ಉತ್ತರಾಧಿಕಾರಿಗಳಿಗೆ ಕೊಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.<br>4. ಈ ರೀತಿ ತೆಗೆದು ಕೊಂಡ ಮುಚ್ಚಳಿಕೆಯನ್ನು ಸಂಬಂಧ ಪಟ್ಟ ಪ್ರಸ್ತಾವೆಗಳ ಜೊತೆ ಇಡಬೇಕು.<br>5. ಸಾಲಗಾರರ ವಾರಸುದಾರರು ತಮ್ಮ ಕ್ಲೈಮ್ ಅರ್ಜಿಯನ್ನು ಸಾಲಗಾರನ ಮರಣ ದೃಢಿಕರಣ ಪತ್ರದ ಜೊತೆಯಲ್ಲಿ ಸಲ್ಲಿಸಬೇಕು.<br>6. ತದನಂತರ, ಸದರಿ ಅರ್ಜಿಯನು ಬ್ಯಾಂಕಿನ ನಿಯಮಗಳಂತೆ ಇತ್ಯರ್ಥಗೊಳಿಸಿ ಭದ್ರತೆಯನ್ನು ಬಿಡುಗಡೆ ಮಾಡಬೇಕು. |
| 9 | **ಸಾಲ ವಸುಲಾತಿ ಮತ್ತು ಅನುಕರಣೆ (Recovery & follow up)** | ಬಡ್ಡಿಯನ್ನು ಖರ್ಚುಹಾಕಿದ ಕೂಡಲೇ ವಸೂಲಾತಿ ಮಾಡಬೇಕು. ಬಡ್ಡಿಹಾಕಿದ ದಿನವೇ ನೋಟಿಸನ್ನು ಎಲ್ಲಾ ಸಾಲಗಾರರಿಗೆ ಕಳುಹಿಸಬೇಕು. ಶಾಖಾ ವ್ಯವಸ್ಥಾಪಕರು/ ಮೇಲ್ವಿಚಾರಕರು ವಾಯಿದೆಯ ದಿನಾಂಕಗಳನ್ನು ಗುರುತಿಸಿಕೊಂಡು, ಸಾಲಗಾರನು ಪಡೆದ ಸಾಲವನ್ನು/ ಬಡ್ಡಿಯನ್ನು ಮರುಪಾವತಿ ಮಾಡಲು ವಿಪಲನಾದರೆ, |

| | |
|---|---|
| | ಈ ಕೆಳಗೆ ತಿಳಿಸಿದ ಕ್ರಮಗಳನ್ನು ಜರುಗಿಸಬೇಕು.<br>1. ಸಾಲಗಾರನು ಸಾಲ ಮಂಜೂರಾತಿಯ ನಿಯಮದಂತೆ ಮರುಪಾವತಿ ಮಾಡಲು ವಿಫಲನಾದರೆ ಸಾಲಗಾರನಿಗೆ ರಿಜಿಸ್ಟರ್ಡ್ ನೋಟಿಸನ್ನು ಕಳುಹಿಸುವ ಮೂಲಕ ಒಂದು ತಿಂಗಳಿನಲ್ಲಿ ಸಾಲ ಮತ್ತು ಬಡ್ಡಿಯನ್ನು ಮರುಪಾವತಿ ಮಾಡದಿದ್ದಲ್ಲಿ ಆಭರಣಗಳನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡುವ ಬಗ್ಗೆ ತಿಳುವಳಿಕೆ ನೀಡಬೇಕು. ಈ ಅವಧಿಯಲ್ಲಿ ಸಾಲ ಮರುಪಾವತಿಯಾಗದ್ದಿದಲ್ಲಿ ಹರಾಜು ಮಾಡುವ ಕಾರ್ಯವನ್ನು ಮಾಡಬೇಕು. ಈ ಕ್ರಮವು ಸಾಲಗಾರನು ತಾನು ಕೊಟ್ಟ ವಿಳಾಸದಲ್ಲಿರಬೇಕು ಮತ್ತು ಸಾಲದ ನೋಟಿಸನ್ನು ಸ್ವೀಕರಿಸಿರಬೇಕು.<br>2. ಸಾಲಗಾರನು ಬಡ್ಡಿಯನ್ನು ಕಟ್ಟಿ ಸಾಲದ ಮಿತಿ ಅಥವಾ ಅದಕ್ಕಿಂತ ಕಡಿಮೆ ಮಟ್ಟಕ್ಕೆ ತಂದಾಗ ಅಂತಹ ಖಾತೆಗಳನ್ನು ನವೀಕರಿಸಿಕೊಡಬಹುದು. ಈಗೆ ಮಾಡಿದ ಹೊಸ ಸಾಲವು ಹೊಸ ಮಂಜೂರಾತಿ ಷರತ್ತುಗಳು ಹಾಗೂ ನಿಯಮಕ್ಕೆ ಅನ್ವಯವಾಗಿರುತ್ತದೆ.<br>3. ಒಂದು ವೇಳೆ ಸಾಲಗಾರ ವಾಸಸ್ಥಳದ ಬಗ್ಗೆ ಬ್ಯಾಂಕಿಗೆ ತಿಳಿಯದಿದ್ದಾಗ ಅಥವಾ ಸಾಲಗಾರರು ಮೃತರಾಗಿದ್ದು ಕಳುಹಿಸಿದ ನೋಟಿಸ್ ವಾಪಾಸಾಗಿದ್ದರೆ, **"ನೋಟೀಸ್ ಆಫ್ ಆಕ್ಷನ್"** ನನ್ನು ನ್ಯೂಸ್ ಪತ್ರಿಕೆಯಲ್ಲಿ ಅಂದರೆ ಆ ಸ್ಥಳದಲ್ಲಿ ಹೆಚ್ಚಿನ ಪ್ರಚಾರ/ ಬಳಕೆಯಲ್ಲಿರುವ ದಿನ ಪತ್ರಿಕೆಯಲ್ಲಿ ಹರಾಜು ಮಾಡುವ ದಿನಾಂಕವನ್ನು 30 ದಿನಗಳ ಮುಂಚೆ **ಅನುಸೂಚಿಯ** 'ಲ್ಲಿ ನಮೂದಿಸಿರುವ ಮಾದರಿಯಲ್ಲಿ ಪ್ರಕಟಣೆ ಮಾಡಬೇಕು. |
| **ಆಭರಣಗಳನು ಹರಾಜು ಮಾಡುವ ಕ್ರಮಗಳು** (Procedure to be adopted by the Branch in respect of auctioning of the Pledged gold Ornaments) | ಆಭರಣಗಳನ್ನು ಹರಾಜು ಮಾಡುವ ಮೊದಲು, ಅಂತ ಖಾತೆಗಳ ಸಂಪೂರ್ಣ ಮಾಹಿತಿಯನ್ನು ಕೇಂದ್ರ ಕಛೇರಿಗೆ ಕಳುಹಿಸಿ, ನಿರ್ಧಿಷ್ಟ ಅನುಮೋದನೆಯನ್ನು ಪಡೆಯ ತಕ್ಕದ್ದು. ಹರಾಜು ಪ್ರಕ್ರಿಯೆಯು ನಿಗಧಿತ ಸಮಯದಲ್ಲಿ ಮುಗಿಸಿ ಬಾಕಿಯಿರುವ ಸಾಲವನ್ನು ಹರಾಜಿನಿಂದ ಬರುವ ಹಣದಿಂದ ವಸೂಲಿ ಮಾಡಬೇಕು.<br>**a) ಎಲ್ಲಿ ಸಾಲಗಾರನು ಬ್ಯಾಂಕಿಗೆ ನೀಡಿರುವ ಪೋಸ್ಟಲ್ ವಿಳಾಸದಲ್ಲಿ ವಾಸವಾಗಿರುವನೋ:**<br>ಬ್ಯಾಂಕಿನ ಸಿಬ್ಬಂದಿ/ ವ್ಯವಸ್ಥಾಪಕರು ಸಾಲಗಾರನನ್ನು ಪದೇ ಪದೇ ಬೇಟಿಮಾಡಿ, ಸಾಮಾನ್ಯ/ ನೊಂದಾಯಿತ ನೋಟಿಸ್ ನೀಡಿದ್ಯಾಗೂ ಸಾಲ ಮರುಪಾವತಿ ಮಾಡಲು ಯಾವುದೆ ಕ್ರಮವನ್ನು ತೆಗೆದುಕೊಳ್ಳದಿದ್ದಲ್ಲಿ, ಶಾಖೆಯಿಂದ ನೊಂದಾಯಿತ ಅಂಚೆ ಸ್ವೀಕೃತಿಯೊಡನೆ " ನೋಟಿಸಿನ್ನಲ್ಲಿ ವಿವರವಾಗಿ ತಿಳಿಸಿ, ಈ ನೋಟಿಸ್ ಕಳುಹಿಸಿದ 30 ದಿನದೊಳಗಾಗಿ ಮರುಪಾವತಿ ಮಾಡದ್ದಿದರೆ ಬ್ಯಾಂಕಿನಲ್ಲಿ ಅಡವು ಇಟ್ಟಿರುವ ಆಭರಣಗಳನ್ನು ಬಹಿರಂಗವಾಗಿ ಹರಾಜುಮಾಡಿ ಬಂದ ಹಣವನ್ನು ಸಾಲದ ಖಾತೆಗೆ ಜಮಮಾಡಲಾಗುವುದು ಎಂದು ತಿಳಿಸುವುದು.<br>**b) ಎಲ್ಲಿ ಸಾಲಗಾರನ ವಿಳಾಸ ಬ್ಯಾಂಕಿಗೆ ಲಭ್ಯವಿಲ್ಲವೋ:**<br>ಮೇಲಿನ ಪ್ಯಾರ (a) ನಲ್ಲಿ ತಿಳಿಸಿದ ಹಾಗೆ ಶಾಖೆಯಿಂದ "ನೊಂದಾಯಿತ ಅಂಚೆ ಸ್ವೀಕೃತಿಯೊಡನೆ" ನೋಟಸಿನ್ನಲ್ಲಿ ವಿವರವಾಗಿ ತಿಳಿಸಿ ನೋಟಿಸ್ ಕಳುಹಿಸಿದ 30 ದಿನದೊಳಗಾಗಿ ಬಾಕಿ ಇರುವ ಸಾಲವನ್ನು ಮರುಪಾವತಿ ಮಾಡದ್ದಿದರೆ ಬ್ಯಾಂಕಿನಲ್ಲಿ ಅಡವು ಇಟ್ಟಿರುವ ಆಭರಣಗಳನ್ನು ಬಹಿರಂಗವಾಗಿ ಹರಾಜುಮಾಡಿ ಬಂದ ಹಣವನ್ನು ಸಾಲಕ್ಕೆ ಜಮಾ ಮಾಡಲಾಗುವುದು.<br>ಮೇಲೆ ತಿಳಿಸಿದ ಪ್ಯಾರ (a) ಮತ್ತು (b) ರಲ್ಲಿ ತಿಳಿದ ಹಾಗೆ-ಸಂಬಂಧಪಟ್ಟ ಪೋಸ್ಟಲ್ ರಶೀದಿಯನ್ನು ಸಂಬಂದಪಟ್ಟ ಸಾಲದ ಕಾಗದ ಪತ್ರಗಳೊಡನೆ ಇಡಬೇಕು.<br>**c) ಸಾಲಗಾರನು ಮೃತನಾಗಿದ್ದಲ್ಲಿ:**<br>ಮೇಲೆ ಹೇಳಿದ ಹಾಗೆ ಮೃತ ಸಾಲಗಾರನ ವಾರಸುದಾರರಿಗೆ ನೋಟಿಸನ್ನು ಕಳುಹಿಸಬೇಕು. |

d) ಯಾವುದೇ ಉತ್ತರ ಬಾರದಿದ್ದಾಗ ಅನುಸರಿಸಬೇಕಾದ ಮುಂದಿನ ಕ್ರಮಗಳು:

1. ಸಾಲಗಾರರಿಂದ/ ವಾರಸುದಾರರಿಂದ ಕಳುಹಿಸಿದ ನೋಟಿಸ್‌ಗಳಿಗೆ ಯಾವುದೇ ಉತ್ತರ ಬಾರದಿದ್ದಾಗ ಸಾರ್ವಜನಿಕ ಹರಾಜು ನೋಟೀಸ್‌ನ್ನು ಕನ್ನಡದಲ್ಲಿ ಸುಮಾರು 200 ರಿಂದ 300 ಪ್ರತಿಗಳನ್ನು ನಿರ್ಧಿಷ್ಟ ಫಾರಂನಲ್ಲಿ ಮುದ್ರಿಸಿ ಸಾಲಗಾರನ ಊರಿನಲ್ಲಿ ಹಾಗೂ ಅಕ್ಕಪಕ್ಕದ ಗ್ರಾಮಗಳಲ್ಲಿ ಹಂಚಬೇಕು. ಅವಶ್ಯವಿದ್ದರೆ ಟಾಮ್ ಟಾಮ್ ಕೂಡ ಮಾಡಿಸಬಹುದು. ಮುದ್ರಿಸಿದ ಹ್ಯಾಂಡ್ ಬಿಲ್ಸ್‌ಗಳನ್ನು ಬ್ಯಾಂಕಿನ ನೋಟಿಸ್ ಬೋರ್ಡ್‌ನಲ್ಲಿ ಹಾಕುವುದರ ಜೊತೆಗೆ ಗ್ರಾಮ ಪಂಚಾಯಿತಿ/ ಹೋಟೆಲ್‌ಗಳಲ್ಲಿ ಚಿತ್ರಮಂದಿರದಲ್ಲಿ ಹಾಕಬಹುದು. ಸದರಿ ಹರಾಜು ನೋಟಿಸ್ ಪ್ರತಿಗಳನ್ನು ಹತ್ತಿರದ ಚಿನ್ನದ ವ್ಯಾಪಾರಿಗಳಿಗೆ ಕಳುಹಿಸಬಹುದು.
2. ಒಂದಕ್ಕಿಂತ ಹೆಚ್ಚು ಸುಸ್ತಿದಾರರಿದ್ದಲ್ಲಿ ಅಂತ ಎಲ್ಲಾ ಸುಸ್ತಿದಾರರನ್ನು ಒಂದೇ ಹ್ಯಾಂಡ್ ಬಿಲ್‌ನಲ್ಲಿ ಮುದ್ರಿಸಬೇಕು.
3. ಈ ರೀತಿ, ಮುದ್ರಣಕ್ಕಾಗಿ, ಪೋಸ್ಟೇಜ್‌ಗಾಗಿ, ಟಾಮ್ ಟಾಮ್‌ಗಾಗಿ ಆಗುವ ಖರ್ಚನ್ನು ಸಮನಾಗಿ ಸಾಲಗಾರರ ಖಾತೆಗೆ ಖರ್ಚುಹಾಕಬೇಕು. ಈ ರೀತಿ ಖರ್ಚುಗಳನ್ನು ಆದಷ್ಟು ಕಡಿಮೆ/ ಕನಿಷ್ಟ ಖರ್ಚಿನಲ್ಲಿ ಮಾಡಬೇಕು.

e) ಹರಾಜು ಮಾಡುವ ವಿಧಿ ವಿಧಾನಗಳು/ ಕ್ರಮಗಳು:

a) ಸಾಲಗಾರರಿಂದ ಯಾವುದೇ ಪ್ರತಿಕ್ರಿಯೆ ಬರದಿದ್ದಾಗ ಅಡವಿಟ್ಟಿರುವ ಆಭರಣಗಳನ್ನು ಮೊದಲೇ ನಿಗಧಿತ ನೋಟಿಸಿನಂತೆ ದಿನಾಂಕ ಹಾಗೂ ಸಮಯದಂದು ಹರಾಜುಮಾಡವುದು. ಸದರಿ ನೋಟಿಸನ್ನು ಬ್ಯಾಂಕಿನ ನೋಟಿಸ್ ಬೋರ್ಡನಲ್ಲಿ ಹಾಕಿರಬೇಕು.

b) ಇದರ ಜೊತೆಗೆ, ಪ್ರಮುಖ ಚಿನ್ನದ ವ್ಯಾಪಾರಿಗಳಿಗೆ ಪ್ರತ್ಯೇಕ ಪತ್ರ ಮುಖೇನ ಹರಾಜಿನಲ್ಲಿ ಭಾಗವಹಿಸುವಂತೆ ಅಹ್ವಾನಿಸಬೇಕು. ಹರಾಜು ಮಾಡಲಿರುವ ಆಭರಣಗಳನ್ನು ತಪಾಸಣೆ/ ಪರಿಶೀಲಿಸಲು ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರಿಗೆ ನಿಗಧಿತ ಹರಾಜು ವೇಳೆಗಿಂತ **ಒಂದು ಗಂಟೆ ಮುಂಚಿತವಾಗಿ ತೋರಿಸಬಹುದು**. ಇದಾದನಂತರ ಚಿನ್ನದ ವ್ಯಾಪಾರಿಗಳಿಗೆ ನಿಗಧಿತ ಹರಾಜಿನಲ್ಲಿ ಉಳಿದ ಬಿಡ್ಡುದಾರ ಜೊತೆಯಲ್ಲಿ ಭಾಗವಹಿಸುವಂತೆ ತಿಳಿಸುವುದು. ಸಾಮಾನ್ಯವಾಗಿ ಹರಾಜನ್ನು ಶಾಖೆಯ ಕೆಲಸದ ದಿನದಲ್ಲಿ ವ್ಯವಹಾರದ ವೇಳೆ ಮುಗಿದ ಮೇಲೆ ಅಂದು ಮಧ್ಯಾನ 4 ಗಂಟೆಯ ಮೇಲೆ ಮಾಡುವುದು.

c) ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಕನಿಷ್ಟ ರೂ. 5000/-ಗಳನ್ನು ಡೆಪಾಜಿಟ್ ಮಾಡಬೇಕು ಹಾಗೂ ಒಂದು ವೇಳೆ ಬಿಡ್ ಮಾಡಿದ ಪೂರ್ಣ ಹಣವನ್ನು ಕಟ್ಟದೇ ಹೋದರೆ ಈ ಠೇವಣಿ ಹಣವನ್ನು ಮುಟ್ಟುಗೋಲು ಹಾಕಲಾಗುವುದು. ಈ ಠೇವಣಿ ಹಣವನ್ನು ಹರಾಜು ದಿನಕ್ಕಿಂತ 3 ದಿನ ಮುಂಚಿತವಾಗಿಯೇ ಮಾಡಬೇಕು ಮತ್ತು ಹಾಗೆ ಮಾಡಿದ ಬಿಡ್ಡುದಾರರನ್ನು ಮಾತ್ರ ಹರಾಜಿನಲ್ಲಿ ಭಾಗವಹಿಸಲು ಬಿಡಬೇಕು.

d) ಬಿಡ್ಡುದಾರರು ಕಟ್ಟಿದ ಠೇವಣಿ ಹಣವನ್ನು ಬ್ಯಾಂಕಿನ **'ಸಂಡರಿ ಡೆಪಾಜಿಟ್ ಖಾತೆಯಲ್ಲಿಡಬೇಕು'**. ಹರಾಜು ಪ್ರಕ್ರಿಯೆ ಮುಗಿದ ನಂತರ ಬಿಡ್ಡ್‌ನಲ್ಲಿ ಸಫಲಾವಾಗದ ಬಿಡ್ಡುದಾರರಿಗೆ ಸಂಡರಿ ಡೆಪಾಜಿಟ್‌ನ್ನ ಎಂಟ್ರಿಗಳನ್ನು ರಿವರ್ಸ್ ಮಾಡಿ ವಾಪಸ್ ಕೊಡಬೇಕು. ಹರಾಜಿನಲ್ಲಿ ಸಫಲವಾದ/ ವಿಜಯಿಯಾದ ಬಿಡ್ಡುದಾರರಿಗೆ ಅವರು ಹರಾಜು ಮಾಡಿದ ಮೊತ್ತದಿಂದ ಠೇವಣಿ ಹಣವನ್ನು ಕಳಿದು ಉಳಿದ ಬಾಕಿ ಹಣವನ್ನು ಬಿಡ್ಡುದಾರರಿಂದ ವಸೂಲಿ ಮಾಡಬೇಕು.

e) ಒಂದಕ್ಕಿಂತ ಹೆಚ್ಚು ಆಭರಣಗಳನ್ನು ಅಡವು ಮಾಡಿದ್ದರೆ, ಎಲ್ಲಾ ಆಭರಣಗಳನ್ನು ಹರಾಜು ಮಾಡುವುದು ಬೇಕಾಗಿಲ್ಲ, ಬಾಕಿಯಿರುವ ಸಾಲವನ್ನು ಮರುಪಾವತಿಸಿಕೊಳ್ಳಲು ಬೇಕಾಗುವಷ್ಟು ಆಭರಣಗಳನ್ನು ಮಾತ್ರ ಮಾರಾಟ ಮಾಡಬೇಕು.

f) ಹರಾಜಿನಲ್ಲಿ ಬಿಡ್ಡುದಾರರು ಕೂಗಿದ ಬೆಲೆಗಳನ್ನು ಒಂದು ಬೇರೆ ಪುಸ್ತಕದಲ್ಲಿ ಸದರಿ ಬಿಡ್ಡುದಾರರ ಹೆಸರು ಮತ್ತು

| | | |
|---|---|---|
| | | ವಿಳಾಸವನ್ನು ಬರೆದು ಅವರ ಹೆಸರಿನ ಮುಂದೆ ಅವರ ಸಹಿಯನ್ನು ಪಡೆಯಬೇಕು. ಹರಾಜಿನಲ್ಲಿ ಯಾವ ಬಿಡ್ಡುದಾರರು ಹೆಚ್ಚು ಬೆಲೆಗೆ ಕೂಗುತ್ತಾರೋ ಅಂಥವರಿಗೆ ಮಾತ್ರ ಆಭರಣಗಳನ್ನು ಮಾರಾಟ ಮಾಡಬೇಕು. ಸದರಿ ಹರಾಜು ಪುಸ್ತಕದಲ್ಲಿ ಹರಾಜಿನಲ್ಲಿ ಭಾಗವಹಿಸುವರಲ್ಲಿ ಇಬ್ಬರ ಸಾಕ್ಷಿ ಹಾಕಿಸಿಕೊಳ್ಳಬೇಕು.<br>g) ಅತಿ ಹೆಚ್ಚು ಬಿಡ್ಡುದಾರರಿಂದ ಪಡೆದ ಹಣವನ್ನು ಸಾಲಗಾರನ ಖಾತೆಗೆ ಜಮಮಾಡಬೇಕು. ಹರಾಜು ಹಣದಿಂದ ಸಾಲದ ಬಾಕಿಯನ್ನು ಪೂರ್ಣ ಮರುಪಾವತಿ ಮಾಡಲು ಸಾಧ್ಯವಾಗದಿದ್ದಲ್ಲಿ ಕೂಡಲೆ ಸಾಲಗಾರರಿಗೆ "ನೊಂದಾಯಿತ ಅಂಚೆ ಸ್ವೀಕೃತಿಯೊಡನೆ" ನೋಟಿಸನ್ನು ಕಳುಹಿಸಿ ಬಾಕಿ ಸಾಲವನ್ನು ಕೂಡಲೇ ಮರುಪಾವತಿ ಮಾಡುವಂತೆ ತಿಳಿಸಬೇಕು. ಅಥವಾ ಅತಿ ಹೆಚ್ಚು ಬಿಡ್ಡ್‌ಮೊತ್ತವು ಬ್ಯಾಂಕಿಗೆ ಬಾಕಿಯಿರುವ ಸಾಲದ ಮೊತ್ತಕ್ಕಿಂತ ಹೆಚ್ಚಿದ್ದರೆ ಈ ಕೆಳಕಂಡ ಕ್ರಮವನ್ನು ಅನುಸರಿಸಬೇಕು.<br>I. ಬಾಕಿ ಸಾಲವನ್ನು ಮರುಪಾವತಿ ಮಾಡಿದ ನಂತರ ಉಳಿಯುವ ಮೊತ್ತವನ್ನು ಬ್ಯಾಂಕಿನ 'ಸಂಡರಿ ಡೆಪಾಸಿಟ್‌ನಲ್ಲಿ' ಇಡಬೇಕು. ಹೆಚ್ಚು ಉಳಿದ ಮೊತ್ತವನ್ನು ಸಾಲಗಾರನ ಇತರೆ ನೇರ ಮತ್ತು ಪರೋಕ್ಷ ಹೊಣೆಗಳಿಗೆ ಜಮಮಾಡಬೇಕು. ಜಮ ಮಾಡುವ ಮೊದಲು ಈ ಬಗ್ಗೆ ಸಾಲಗಾರನಿಗೆ ನೋಟಿಸ್ ಜಾರಿ ಮಾಡಿ ತಿಳುವಳಿಕೆ ನೀಡುವುದು.<br>II. ಸಾಲಗಾರನಿಂದ ಯಾವುದೇ ನೇರ ಅಥವಾ ಪರೋಕ್ಷ ಸಾಲಗಳು ಬಾಕಿ ಇಲ್ಲದಿದ್ದರೆ ಮಾರಾಟದಿಂದ ಬಂದ ಹೆಚ್ಚು ಹಣವನ್ನು ಸಾಲಗಾರನ ಉಳಿತಾಯ ಖಾತೆಗೆ ಜಮಮಾಡುವುದು. ಸಾಲಗಾರನ ಉಳಿತಾಯ ಖಾತೆಯು ಕ್ಲೋಸ್ ಆಗಿದ್ದಲ್ಲಿ, ಈ ಹೆಚ್ಚು ಮೊತ್ತವನ್ನು ಸಾಲಗಾರನಿಗೆ ಬ್ಯಾಂಕರ್ಸ್ ಚೆಕ್ ಮುಖಾಂತರ ಕಳುಹಿಸಬೇಕು. ಕೆಲವೊಂದು ಸಂದರ್ಭದಲ್ಲಿ ಸಾಲಗಾರನ ನಿರ್ಧಿಷ್ಟ ವಿಳಾಸ ಸಿಗದಿದ್ದಲ್ಲಿ, ಈ ಮೊತ್ತವನ್ನು ಬ್ಯಾಂಕಿನ ಸಂಡರಿ ಡೆಪಾಜಿಟ್‌ನಲ್ಲಿ ಇಡಬೇಕು.<br>**ಮತ್ತೊಮ್ಮೆ ತಿಳಿಸುವುದೇನೆಂದರೆ:**<br>• ಹರಾಜು ಪ್ರಕ್ರಿಯೆಯನ್ನು ಕೇಂದ್ರ ಕಛೇರಿಯ ಅನುಮೋದನೆ ಪಡೆದ ನಂತರವೇ ಮಾಡಬೇಕು.<br>• ಹರಾಜು ಪ್ರಕ್ರಿಯೆಯನ್ನು ಕೊನೆಯ ಅಸ್ತ್ರವಾಗಿ ಬಳಸಬೇಕು ಹಾಗೂ ಸಾಲಕ್ಕೆ ಬರುವ ವಸೂಲಾತಿಯನ್ನು ಸಾಲದ ಖಾತೆಗೆ ಜಮಮಾಡಬೇಕು. |
| 11 | **ಬೆಲೆ ಕಟ್ಟುವವರನ್ನು ನೇಮಿಸಿಕೊಳ್ಳುವ ಬಗ್ಗೆ (Appointment of Appraiser)** | • ಸ್ಥಳೀಯವಾಗಿ ಲಭ್ಯವಿರುವ ವ್ಯಕ್ತಿಗಳನ್ನು ಕೇಂದ್ರ ಕಛೇರಿಯ ಅನುಮತಿಯನ್ನು ಪಡೆದು ನೇಮಿಸಿಕೊಳ್ಳುವುದು ನಂತರ ರೂ. 200/– ಬೆಲೆಯ ಸ್ಟಾಂಪ್ ಪೇಪರಿನ ಮೇಲೆ ಬೆಲೆಕಟ್ಟುವವರಿಂದ (Appraiser) ಒಪ್ಪಂದವನ್ನು ಮಾಡಿಕೊಳ್ಳಬೇಕು ಹಾಗೂ ಸದರಿ ಒಪ್ಪಂದದ ಡಾಕ್ಯುಮೆಂಟ್‌ಅನ್ನು ಶಾಖೆಯ ಡಾಕ್ಯುಮೆಂಟ್ ರಿಜಿಸ್ಟರ್‌ನಲ್ಲಿ ನಮೂದಿಸಿ ನಂತರ ಶಾಖಾ ವ್ಯವಸ್ಥಾಪಕರ ವೈಯಕ್ತಿಕ ಅಧೀನದಲ್ಲಿಡಬೇಕು.<br>• ಶಾಖೆಗೆ ಸೀಮಿತವಾದ ಬೆಲೆ ನಿಗಧಿ ಮಾಡುವರು ಬ್ಯಾಂಕಿಗೆ ರೂ. 10,000/– ಗಳ ನಗದು ಭದ್ರತೆಯನ್ನು ಕೊಡಬೇಕು. ಈ ಹಣವನ್ನು ಇವರು ಬೆಲೆ ನಿಗಧಿಗಾರರಾಗಿ ಮುಂದುವರೆಯುವವರೆಗೆ ವಾಪಸ್ ಕೊಡಬಾರದು. ಬೆಲೆ ನಿಗಧಿಗಾರರು ಆಭರಣಗಳ ಅಪ್ರೈಸನ್ನು ಶಾಖೆಯ ಆವರಣದಲ್ಲಿಯೇ ಮಾಡಬೇಕು. ಆಪ್‌ರೈಸರ್‌ರವರು, ಶಾಖೆಯ ಬೇಡಿಕೆಗೆ ಅನುಗುಣವಾಗಿ ಶಾಖೆಗೆ ಭೇಟಿ ನೀಡಬೇಕು ಹಾಗೂ ಆಭರಣಗಳ ಮೌಲ್ಯ ಮಾಪನವನ್ನು ಮಾಡಿ ಕೊಡಬೇಕು.<br>• ಆಪ್‌ರೈಸರ್‌ರವರ ಸೇವೆ ಶಾಖೆಗೆ ಲಭ್ಯವಿಲ್ಲದಿದ್ದಲ್ಲಿ ಶಾಖಾ ವ್ಯವಸ್ಥಾಪಕರೇ ಶಾಖೆಗಳಿಗೆ ಒದಗಿಸಿರುವ ಟಚ್ ಸ್ಟೋನ್ ಮತ್ತು ಅಸಿಡನ್ನು ಉಪಯೋಗಿಸಿ ಆಭರಣಗಳ ತೂಕ, ಸಾಚತನ ಮತ್ತು ನಿರ್ಮಲತ್ವದ ಬಗ್ಗೆ ಪರಿಶೀಲಿಸಬೇಕು ಹಾಗೂ ಆಭರಣಗಳ ಮೌಲ್ಯವನ್ನು ಅದರ ತೂಕ ಮತ್ತು ನಿರ್ಮಲತ್ವದ ಆಧಾರದ ಮೇಲೆ ನಿರ್ಧರಿಸಬೇಕು. ಆಭರಣದಲ್ಲಿ ಅಡಕವಾಗಿರುವ ಎಲ್ಲಾ |

| | | |
|---|---|---|
| | | ಅನ್ಯ ಪದಾರ್ಥಗಳಾದ ವ್ಯಾಕ್ಸ್, ದಾರ, ಕಟ್ಟು ಹಾಗೂ ಬೆಲೆ ಬಾಳುವ ಕಲ್ಲು/ ಮುತ್ತುಗಳನ್ನು ಹೊರತುಪಡಿಸಿ ಆಭರಣಗಳ ಮೌಲ್ಯವನ್ನು ನಿರ್ಧರಿಸಬೇಕು. ಸಾಧ್ಯವಾದಷ್ಟು ಅಂತ ಆಭರಣಗಳ ಮೇಲೆ ಸಾಲ ಕೊಡದಿರುವುದೇ ಉತ್ತಮ. ಕೆಲವೊಮ್ಮೆ ಆಭರಣಗಳ ಮೇಲೆ ಇರುವ ಅಕ್ಷರಗಳು ಸಾಲಗಾರರ ಹೆಸರಿಗೆ ಹೋಲಿಕೆ ಇರದಿದ್ದಲ್ಲಿ ಸಾಲಗಾರರಿಂದ ಒಂದು ಹೇಳಿಕೆಯ ಪತ್ರವನ್ನು ಅಂದರೆ ಅವರಿಗೆ ಈ ಆಭರಣವು ಹೇಗೆ ಬಂತು ಎಂಬ ಬಗ್ಗೆ ಮಾಹಿತಿ ಪಡೆಯಬೇಕು.<br>• ಚಿನ್ನದ ಗಟ್ಟಿ, ಚಿನ್ನದ ಬಿಸ್ಕೆಟ್, ಚಿನ್ನದ ಬಾರ್ ಹಾಗೂ ಚಿನ್ನದ ನಾಣ್ಯಗಳ ಮೇಲೆ ಸಾಲ ಕೊಡಬಾರದು.<br>• ಚಿನ್ನದ ಆಭರಣಗಳನ್ನು ಅಪ್ರೈಸರ್ ಅಪ್ರೈಸ್ ಮಾಡಿದಾಗ್ಯೂ, ಆಭರಣಗಳ ಸಾಚತನ, ನಿರ್ಮಲತ್ವ ಹಾಗೂ ತೂಕದ ಬಗ್ಗೆ ಪರಿಶೀಲಿಸುವುದು, ಮೌಲ್ಯದ ಬಗ್ಗೆ ದೃಢೀಕರಿಸುವುದು, ವ್ಯವಸ್ಥಾಪಕರ ಆದ್ಯಕರ್ತವ್ಯವಾಗಿರುತ್ತದೆ. ಆಭರಣಗಳ ಮಾಲಿಕತ್ವದ ಬಗ್ಗೆ ಸ್ವಲ್ಪ ಅನುಮಾನ ಬಂದರೆ ಚಾಣುಕ್ಯತೆಯಿಂದ ತಿರಸ್ಕರಿಸುವುದು. |
| 12 | ತೆಗೆದುಕೊಳ್ಳಬೇಕಾದ ಕಾಗದ ಪತ್ರಗಳು (Documents to be Obtained) | 1. ಸಾಲದ ಅರ್ಜಿ, ಕಿಮ್ಮತ್ತು ನಿರ್ಧರಿಸುವವರ ದೃಢೀಕರಣ, ಸಾಲ ಮಂಜೂರಾತಿ ಕರಾರು ಹಾಗೂ ನಿಬಂಧನೆಗಳು ಮತ್ತು ಡಿ.ಪಿ.ಎನ್. (MCDCCB-0046)<br>2. ಆಭರಣಗಳ ಅಂಗಿಕಾರ ರಶೀದಿ (Acknowledgement) (MCDCCB-0047)<br>3. ಚಿನ್ನದ ಆಭರಣಗಳನ್ನು ಸ್ವೀಕೃತಿ ಪತ್ರವನ್ನು ಪಡೆಯದೆ ಬಿಡುಗಡೆ ಮಾಡುವಾಗ ತೆಗೆದುಕೊಳ್ಳಬೇಕಾದ ಇಂಡೆಮಿನಿಟಿ ಪತ್ರ (MCDCCB-0065)<br>4. ಚಿನ್ನದ ಆಭರಣಗಳನ್ನು ಹರಾಜು ಮಾಡುವ ಮೊದಲು ಕೊಡುವ ಹರಾಜು ತಿಳುವಳಿಕೆ ಪತ್ರ (MCDCCB-0066) |
| 13 | ಉತ್ಪನ ಕೋಡ್ (Product Code) | Demand Loan-(JL) |